(ಇಂದು ದಿನಾಂಕಃ 20–09–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ಎಂ ಟಿ ಹೆಚ್ ವಕೀಲರಿಂದ ಃ -

1) ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಓದು ಬರಹ ಬರುತ್ತದೆ. ನಾನು ಆಂಗ್ಲ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಕರೋನಾ ಮಹಾಮಾರಿಯು 2020 ರಲ್ಲಿ ಬಂದಿದ್ದು ಅದರಿಂದ ಲಾಕಡೌನ ಯಾವ ದಿನಾಂಕದಿಂದ ಎಲ್ಲಿಯವರೆಗೆ ಆಗಿರುತ್ತದೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಪ್ರತಿವಾದಿಯು ನನ್ನ ಬಳಿ ಆತನ ಮನೆತನದ ಅಡಚಣೆಗೆ ಹಣದ ಸಹಾಯ ಮಾಡಲು ಕೇಳಿಕೊಂಡಿರುತ್ತಾನೆ.

2) ನಾನು ನೀಡಿದ ಹಣವನ್ನು ದಿನಾಂಕ 22-09-2022 ರಂದು ಮರುಪಾವತಿಸಲು ಜಾಮೀನುದಾರರಾದ ಮಲ್ಲಯ್ಯ ಮಠಪತಿ ಹಾಗೂ ಶಿವಪ್ಪ ಜಾವೂರ, ಎಸ್.ಆರ್.ದೇಸಾಯಿ ಹಾಗೂ ಅಮೃತಪ್ಪ ಮಡ್ಡನ್ನವರ ರವರಿಂದ ಪ್ರತಿವಾದಿಯರಲ್ಲಿ ಕೋರಿಕೊಂಡಿರುತ್ತೇನೆ. ಶಿವಪ್ಪ ಜಾವೂರ ಮರಣ ಹೊಂದಿರುತ್ತಾರೆ. ಮೇಲಿನ ಜಾಮೀನುದಾರರು ತಮ್ಮ ಜಾಮೀನಿನ ಬಗ್ಗೆ ಲಿಖಿತ ರೂಪದಲ್ಲಿ ಬರೆದು ಕೊಟ್ಟಿಲ್ಲ. ನಾನು ಪ್ರತಿವಾದಿಯಲ್ಲಿ ವೈಯಕ್ತಿಕವಾಗಿ ಹಣ ಮರುಪಾವತಿಸಲು ಕೇಳಿರುತ್ತೇನೆ. ವಾದ ಪತ್ರದಲ್ಲಿ ಹಾಗೂ ನನ್ನ ಪ್ರಮಾಣ ಪತ್ರದಲ್ಲಿ ದಿನಾಂಕ 22-09-2022 ರ ಉಲ್ಲೇಖವಿರುವುದಿಲ್ಲ.

3) ದಿನಾಂಕ 22-09-2022 ರಂದು ಪ್ರತಿವಾದಿಯು ಜಾಮೀನುದಾರರಾದ ಮಲ್ಲಯ್ಯ ಮಠಪತಿ ರವರಿಂದ ನನಗೆ 10 ಸಾವಿರ ರೂಪಾಯಿ ಹಣವನ್ನು ನೀಡಿ, ಕೋವಿಡ್ ಇದ್ದ ಕಾರಣ ಕಾಲವಕಾಶ ಕೋರಿರುತ್ತಾನೆ. ಸದರಿ ವಿಷಯವನ್ನು ನನ್ನ ವಾದ ಪತ್ರದಲ್ಲಿ ಹಾಗೂ ನನ್ನ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ. 10 ಸಾವಿರ ರೂಪಾಯಿ ಹಣ ನೀಡಿದ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಮೇಲಿನ 10 ಸಾವಿರ ರೂಪಾಯಿ ವ್ಯವಹಾರದ ಬಗ್ಗೆ ದಾಖಲಾತಿ ಇರುವುದಿಲ್ಲ. 10 ಸಾವಿರ ರೂಪಾಯಿ ಹಣ ನೀಡಿದ ಬಗ್ಗೆ ನಿಪಿ-1 ರಲ್ಲಿ ಉಲ್ಲೇಖ ಮಾಡಲು ಅಥವಾ ಹೆಚ್ಚುವರಿ ಪತ್ರವನ್ನು ಸೇರಿಸಲು ಪ್ರಯತ್ನ ಪಟ್ಟಿಲ್ಲ. 10 ಸಾವಿರ ರೂಪಾಯಿ ಬಗ್ಗೆ ಹಾಗೂ ನಿಖರವಾದ ದಿನಾಂಕದ ಬಗ್ಗೆ ವಕೀಲರ ಮೂಲಕ ನೀಡಿದ ನೋಟಿಸನಲ್ಲಿ ಉಲ್ಲೇಖವಿಲ್ಲ ಅಂದರೆ ಸರಿಯಲ್ಲ. ಹಣ ಮರುಪಾವತಿ ಮಾಡಲು ಕಾಲವಕಾಶ ಕೋರಿದ್ದ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

4) ನನ್ನ ವಾದ ಪತ್ರದಲ್ಲಿ ಪ್ರತಿವಾದಿಯು ಹೊಲವನ್ನು ಮಾರಾಟಕ್ಕೆ ಹಚ್ಚಿದ ವಿಷಯಗಳನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ವಾದ ಪತ್ರದ 8 ನೇ ಕಂಡಿಕೆ ಹಾಗೂ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 7 ನೇ ಕಂಡಿಕೆಯಲ್ಲಿ ಸುಳ್ಳು

ಸಂಗತಿಗಳನ್ನು ನಮೂದು ಮಾಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಕಂಡಿಕೆಯಲ್ಲಿ ಸೆಪ್ಟೆಂಬರ 2022 ರಲ್ಲಿ 10 ಸಾವಿರ ರೂಪಾಯಿ ಹಣವನ್ನು ನೀಡಿ ಉಳಿದ ಹಣ ಒಂದೇ ಸಲ ಮರಪಾವತಿ ಮಾಡಲು ಒಪ್ಪಿಕೊಂಡು ಕಾಲವಕಾಶ ಕೋರಿದ ಬಗ್ಗೆ ಸುಳ್ಳು ನುಡಿದಿರುತ್ತೇನೆ ಅಂದರೆ ಸರಿಯಲ್ಲ.

5) ಮರಳಿ ಪ್ರತಿವಾದಿಯು ಡಿಸೆಂಬರ 2022 ರಲ್ಲಿ ಹಾಗೂ ಮಾರ್ಚ 2023 ರಲ್ಲಿ ತಲಾ 10 ಸಾವಿರ ರೂಪಾಯಿ ನೀಡಿರುತ್ತಾನೆ ದಿನಾಂಕ ನೆನಪಿಲ್ಲ. ಸದರಿ ವಿಷಯವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಹಾಗೂ ವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವೆಯನ್ನು ಕಾಲಪರಿಮಿತಿ ಅಧಿನಿಯಮದ ಅಡಿಯಲ್ಲಿ ತರಲು ಸುಳ್ಳು ಸಂಗತಿಗಳನ್ನು ಸೃಷ್ಟಿ ಮಾಡಿರುತ್ತೇನೆ ಅಂದರೆ ಸರಿಯಲ್ಲ.

6) ಪ್ರತಿವಾದಿಯು ಹಣ ಪಡೆದು ಮರುಪಾವತಿ ಮಾಡದೇ ಮುಂದುಡುವ ಹವ್ಯಾಸದವನು ಹಾಗೂ ಕೋವಿಡ ಅವಧಿಯ ದುರ್ಲಾಬ ಪಡೆದು ಸಮಯ ಪಡೆಯುತ್ತಾ ಹೋಗುತ್ತಿದ್ದಾನೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸೆಪ್ಟೆಂಬರ 2022, ಡಿಸೆಂಬರ 2022 ಹಾಗೂ ಮಾರ್ಚ 2023 ರಲ್ಲಿ ತಲಾ 10 ಸಾವಿರ ರೂಪಾಯಿ ಹಣ ನೀಡಿದ ಬಗ್ಗೆ ನಿಖರವಾದ ದಿನಾಂಕವನ್ನು ನಿಪಿ-2 ರಲ್ಲಿ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಪರಿಶೀಲಿಸಿ ಇಲ್ಲಾ ಎಂದು ನುಡಿಯುತ್ತಾರೆ. ನಿಪಿ-2 ನ್ನು ಹೊರತು ಪಡಿಸಿ ನಾನು ಬೇರೆ ಯಾವುದೇ ನೋಟಿಸನ್ನು ವಕೀಲರ ಮೂಲಕ ನೀಡಿಲ್ಲ.

7) ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಅದನ್ನು ನಾನು ಧಾರವಾಡದ ಶ್ರೀ ನವೀನ ಹೆಚ್ ಟಿ ವಕೀಲರಿಂದ ಪ್ರತಿವಾದಿಗೆ ನೋಟಿಸ ನೀಡಿರುತ್ತೇನೆ ಎಂದರೆ ಸಾಕ್ಷಿಯು ಅದನ್ನು ಪರಿಶೀಲಿಸಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು **ನಿ.ಡಿ.1** ಎಂದು ಗುರುತಿಸಲಾಯಿತು. ಅದರ ಲಗತ್ತು ಅಂಚೆ ಲಕೋಟೆಯನ್ನು **ನಿ.ಡಿ.1(ಎ)** ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಸುಳ್ಳು ಸಂಗತಿಗಳು ನಮೂದು ಇರುತ್ತದೆ ಅಂದರೆ ಸರಿಯಲ್ಲ. ನಿಡಿ-1 ರಲ್ಲಿ ದಿನಾಂಕ 25-11-2022 ಇರುತ್ತದೆ ಎಂದರೆ ಸರಿ. 22-09-2022 ರಂದು 10 ಸಾವಿರ ರೂಪಾಯಿ ಪ್ರತಿವಾದಿಯಿಂದ ಪಡೆದುಕೊಂಡ ಬಗ್ಗೆ ನಿಡಿ-1 ರಲ್ಲಿ ಉಲ್ಲೇಖವಿಲ್ಲ ಎಂದರೆ ಸಾಕ್ಷಿಯು ಅದನ್ನು ಪರಿಶೀಲಿಸಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿ ಸಹ ಸುಳ್ಳು ಸಂಗತಿಗಳನ್ನು ನಮೂದು ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ.

8) ಪ್ರತಿವಾದಿಯು ಜೂನ 2019 ನೇ ಕೊನೆಯ ವಾರದಲ್ಲಿ ನನಗೆ ಸಂಪೂರ್ಣ ಹಣವನ್ನು ಮರುಪಾವತಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಹಣ ಮರಪಾವತಿ ಮಾಡಿದ ದಿನದಂದು ಪ್ರತಿವಾದಿಯು ನನ್ನ ಬಳಿ ಕರಾರನ್ನು ಮರಳಿಸಲು ಕೇಳಿದಾಗ ನಾನು ಅದು ಮನೆಯಲ್ಲಿ ಕಳೆದು ಹೋಗಿರುತ್ತದೆ ಸಿಕ್ಕಿದಲ್ಲಿ ಹುಡುಕಿ ಕೊಡುತ್ತೇನೆ ಎಂದು ಹೇಳಿರುತ್ತೇನೆ ಅಂದರೆ ಸರಿಯಲ್ಲ.

ಪ್ರತಿವಾದಿಯು ನನ್ನ ಮಾತಿಗೆ ನಂಬಿ ಮರಳಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. ಆದಕಾರಣ ನಿಪಿ-1 ನನ್ನ ಬಳಿ ಉಳಿದುಕೊಂಡಿರುತ್ತದೆ ಅಂದರೆ ಸರಿಯಲ್ಲ.

9) ಸದರಿ ಕರಾರು ಪತ್ರದ ದೂರಪಯೋಗ ಪಡಿಸಿಕೊಂಡು ದಿನಾಂಕ 08-07-2024 ರಂದು ನಿಪಿ-2 ರ ಅನುಸಾರ ಸುಳ್ಳು ಸಂಗತಿಗಳನ್ನು ಕಾಣಿಸಿ ಹೆಚ್ಚಿನ ಹಣ ಪಡೆಯುವ ಉದ್ದೇಶದಿಂದ ಪ್ರತಿವಾದಿಗೆ ನೋಟಿಸ ನೀಡಿರುತ್ತೇನೆ ಅಂದರೆ ಸರಿಯಲ್ಲ. ನಿಪಿ-2 ದಿನಾಂಕ 10-07-2024 ರಂದು ಪ್ರತಿವಾದಿಗೆ ಸ್ವೀಕೃತಿಯಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಗೆ ಈಗ ಅಂದಾಜು 72 ವರ್ಷ ವಯಸ್ಸಿನವರು ಎಂದರೆ ಇರಬಹುದು. ಪ್ರತಿವಾದಿಗೆ ವಯೋಸಾಮಾನ್ಯ ಖಾಯಿಲೆಗಳು ಇರುತ್ತವೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗೆ ಅನಾರೋಗ್ಯದ ಕಾರಣ ನಿಪಿ-2 ಕ್ಕೆ ಉತ್ತರ ನೀಡಲು ಆಗಿರುವುದಿಲ್ಲ ಎಂದರೆ ಸಾಕ್ಷಿಯು ದಿನನಿತ್ಯ ಓಡಾಟ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆದಕಾರಣ ನಾನು ಸುಳ್ಳು ಸಂಗತಿಯ ಮೇರೆಗೆ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

10) ಪ್ರತಿವಾದಿಯು ಜೂನ 2019 ರ ಕೊನೆಯ ವಾರದಲ್ಲಿ ಸಂಪೂರ್ಣ ಹಣ ಮರುಪಾವತಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಪ್ರತಿವಾದಿಯಿಂದ ಹೆಚ್ಚಿನ ಹಣವನ್ನು ವಸೂಲಿ ಮಾಡಲು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

11) ಈ ಮೊದಲು ಪ್ರತಿವಾದಿಯು 2019 ರಂದು ನನ್ನ ಬಳಿಯಿಂದ ಬಿನಶೇತ್ಕಿ 5 ಗುಂಟೆ ವಿಸ್ತೀರ್ಣದ ಪ್ಲಾಟನ್ನು ಖರೀದಿ ಮಾಡಿರುತ್ತಾನೆ ಎಂದರೆ ಸರಿ. ದಿನಾಂಕ ನೆನಪಿಲ್ಲ. ನನ್ನ ಸಹೋದರನಾದ ಕರವೀರಪ್ಪ ದೇಸಾಯಿ ರವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ಮೇಲೆ ಹೇಳಿ ಪ್ಲಾಟ ಕರವೀರಪ್ಪ ದೇಸಾಯಿ ರವರ ಹೆಸರಿನಲ್ಲಿ ಇದ್ದು ಅವರ ಮರಣದ ನಂತರ ನನ್ನ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ.

12) ದೇವಪ್ಪ ಗುಳಗಂಜಿ ಹಾಗೂ ಇತರರು ಸೇರಿ ನನ್ನ ಹಾಗೂ ಪ್ರತಿವಾದಿಯ ವಿರುದ್ಧ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯ ನವಲಗುಂದ ರವರಲ್ಲಿ ಅಸಲು ದಾವಾ ಸಂಖ್ಯೆ 39/2019 ನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ದಿನಾಂಕ ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ದಾವೆಯು ನಾನು ಹಾಗೂ ದೇವಪ್ಪ ರವರು ಮಿಲಾಪೆಯಾಗಿ ಸಲ್ಲಿಸಿದ್ದು ಅದು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿಯು ನಾನು ಸಲ್ಲಿಸಿಲ್ಲ ಆದರೆ ವಜಾಗೊಂಡಿರುತ್ತದೆ. ಸದರಿ ದಾವೆ ದಿನಾಂಕ 07-03-2024 ರಂದು ವಜಾಗೊಂಡಿರುತ್ತದೆ ಎಂದರೆ ಸರಿ.

13) ಸದರಿ ದಾವೆಯು ವಜಾಗೊಂಡ ಕಾರಣ ನನಗೆ ಪ್ರತಿವಾದಿಯ ಮೇಲೆ ದ್ವೇಷವಿದ್ದು ಸದರಿ ದ್ವೇಷದ ಕಾರಣ ಹೆಚ್ಚಿನ ಹಣ ಪಡೆಯುವ ಉದ್ದೇಶದಿಂದ ಪ್ರಸ್ತುತ ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನನಗೆ ದಾವಾ ಕಾರಣ ಉಂಟಾಗಿಲ್ಲ ಅಂದರೆ ಸರಿಯಲ್ಲ. ನಾನು ಜೂನ 2019

ಕೊನೆಯ ವಾರದಲ್ಲಿ ಪ್ರತಿವಾದಿಯಿಂದ ಸಂಪೂರ್ಣ ಹಣವನ್ನು ಪಡೆದುಕೊಂಡರು ಸಹ ಇಲ್ಲಾ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-1 ರ ಅನುಸಾರ ಹಣ ನೀಡುವಾಗ ಅಥವಾ ಮರುಪಾವತಿ ಮಾಡುವಾಗ ಸಾಕ್ಷಿದಾರರು ಇರಲಿಲ್ಲ ಅಂದರೆ ಸರಿಯಲ್ಲ. ಸಾಕ್ಷಿದಾರರು ಇರುತ್ತಾರೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲಾ.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**